ತಲುಪಲೂ ತಡವಾಗಲಿಲ್ಲ!

ಮಾಲವಿಕೆ ಬಳಿಗೆ ರಾಜಭಟರು ಬಂದಾಗ ಜಾಣೆಯಾದ ಅವಳು ಸನ್ನಿವೇಶವನ್ನು ಸಮಗ್ರವಾಗಿ ಅರಿತುಕೊಳ್ಳಲು ಸಮರ್ಥಳಾದಳು. ಸೇನಾಪತಿ ವ್ರಷಸೇನನ್ನು ಅವಳು ಚೆನ್ನಾಗಿ ಬಲ್ಲಳು. ಶೂರನೂ ಧೀರನೂ ಆಗಿರುವ ಅವನು ಒಂದು ರೀತಿಯಲ್ಲಿ ಮುಗ್ಧನೂ ಆಗಿದ್ದನು. ರಾಜನಿಷ್ಠೆ ರಾಷ್ಟ್ರಪ್ರೇಮದಂತಹ ವಿಷಯಗಳಲ್ಲಿ ಭಾವುಕನಾಗುತ್ತಿದ್ದನೇ ಹೊರತು ಪ್ರೀತಿಪ್ರೇಮ ನಿಸರ್ಗ ಸೌಂದರ್ಯದಂತಹ ಸಂಗತಿಗಳ ಬಗ್ಗೆ ಅನಾಸಕ್ತಿಯಿರುವುದು ಅವಳಿಗೆ ಗೊತ್ತು. ವ್ರಷಸೇನನಿಂದ ಇಂಥ ಕಾವ್ಯದ ಸಾಲುಗಳನ್ನು ರಚಿಸಲು ಸಾಧ್ಯವಿಲ್ಲ ಎನ್ನುವುದು ಅವಳಿಗೆ ಅಂದಾಜಿತ್ತು. ಕಾವ್ಯ ಯಾರದೇ ಇರಲಿ ಇಂಥ ಸುಂದರ ಸಾಲುಗಳತ್ತ ಅವನ ಗಮನ ಹೋಯಿತಲ್ಲ ಎಂಬುದೇ ಅವಳಿಗೆ ಹೆಮ್ಮೆಯ ವಿಷಯವಾಗಿತ್ತು. ಈಗ ತಾನು ವ್ರಷಸೇನನ ಹೆಸರನ್ನು ಹೇಳಿಬಿಟ್ಟರೆ ಅವನಿಗೆ ಅಪಾಯ ಖಚಿತ. ತಾನು ಪ್ರೀತಿಸಿದ ಜೀವದ ಕೂದಲು ಕೂಡ ಕೊಂಕದಂತೆ ನೋಡಿಕೊಳ್ಳುತ್ತೇನೆಂದು ಪಣತೊಟ್ಟಳು. ಮಂತ್ರಿ ಪರಿಪರಿಯಾಗಿ ಪ್ರಶ್ನಿಸಿದರೂ ಅವಳ ಉತ್ತರ ಒಂದೇ ಆಗಿತ್ತು: ಜಗತ್ತಿನಲ್ಲಿ ಹೃದಯಾರೆ ಪ್ರೇಮಿಸುವ ಯಾರೂ ಬರೆಯಬಹುದಾದ ಸಾಲುಗಳಲ್ಲವೆ ಅವು? ನಾನೇ ಬರೆದ ಸಾಲುಗಳು ಅಂತಿಟ್ಟುಕೊಳ್ಳಿ! ನೀವು ಪ್ರೇಮಿಸಿದರೆ ಹೀಗೇ ಬರೆಯುತ್ತಿದ್ದಿರಿ. ಪ್ರೇಮವು ಸ್ಥಾವರವೂ ಹೌದು, ಜಂಗಮವೂ ಹೌದು; ಪ್ರೇಮವು ಬೀಜವೂರುತ್ತಾ ಸಾಗುವ ವೃಕ್ಷವಿದ್ದಂತೆ! ಪ್ರೇಮಕ್ಕಾಗಿ ನಾನು ಬಲಿದಾನಕ್ಕೂ ಸಿದ್ಧಳಿರುವೆ!...

ಮಾಲವಿಕೆಯ ಶಿರಚ್ಛೇದನವಾಯಿತು. ಗಂಡನು ವೇಶ್ಯಾಗೃಹಕ್ಕೆ ಹೋಗುವುದನ್ನು ತಪ್ಪಿಸಲಾಗದವಳು ಗೃಹಿಣಿಯಾಗಲು ಅನರ್ಹ ಎಂಬ ಶಾಸನದಡಿ ಶಿಕ್ಷೆ ವಿಧಿಸಲಾಗಿದೆ ಎಂದು ಘೋಷಿಸಲಾಯಿತು! ಅಮಾಯಕಳಾದ ಮಾಲವಿಕೆಯ ಸಾವಿಗೆ ತಾನು ಕಾರಣನಾದೆನಲ್ಲ ಎಂಬ ಕೊರಗು ಸಿರಿವಂತನನ್ನು ಅದೆಷ್ಟು ಕಾಡಿತೆಂದರೆ ಹಗಲು ರಾತ್ರಿಗಳ ಪರಿವೆಯಿಲ್ಲದೇ ಅವಳ ಸಮಾಧಿಯ ಬಳಿ ಪ್ರಾಯಶ್ಚಿತ್ತ ಮಾಡಿಕೊಳ್ಳುವನು. ಬೆಳದಿಂಗಳ ರಾತ್ರಿಯಲ್ಲಿ ಹೃದಯ ಬಡಿತದ ಧ್ವನಿ ಕೇಳಿದಂತಾಗಿ ನೆಲಕ್ಕೊರಗಿ ಸಮಾಧಿಗೆ ಕಿವಿ ಹಚ್ಚುವನು. ಸಿರಿವಂತನಿಗೆ ಭ್ರಾಂತಿಯಾಗಿದೆ ಎಂದು ಜನರು ಮರುಕ ತೋರುವರು.

★★★

ಇತ್ತ ಸ್ವರಚಿತ ಕಾವ್ಯವೆಂದು ಕಿರಿಯ ರಾಣಿಯೆದುರು ಕೊಚ್ಚಿಕೊಂಡಿದ್ದ ಮಹಾರಾಜನಿಗೆ ಸತ್ಯ ಬಯಲಾದ ಅವಮಾನವನ್ನು ಅರಗಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಕಿರಿಯರಾಣಿಗೆ ಮುಖ ತೋರಿಸುವುದು ಹೇಗೆ? ಆದರೆ ಕಿರಿಯರಾಣಿಯನ್ನು ಕಾಣದಿರುವುದು ಸಾಧ್ಯವೆ! ಕೋಪ ವಿರಹ ಅಸಹಾಯಕತೆಯಲ್ಲಿ ಬೆಂದನು. ಹೆಚ್ಚೆಚ್ಚು ಏಕಾಂತವನ್ನು ಬಯಸಿದನು. ಅಂತಃಪುರದಲ್ಲಿ ಅಣಕಿಸುತ್ತಾ ರಾಶಿಯಾಗಿದ್ದ ಮಧುರಮತಿ ವಿರಚಿತ ಕಾವ್ಯವನ್ನು ಎಸೆಯುವನು. ಪುನಃ ಎತ್ತಿ ಓದುವನು. ಸಾಲುಗಳ ಅರ್ಥವನ್ನು ಮೊದಲ ಬಾರಿಗೆ ತಿಳಿದವನಂತೆ ಮತ್ತೆ ಮತ್ತೆ ಓದುವನು. ಮನಸಿಗೊಪ್ಪದೆಡೆ ಕಾವ್ಯ ಸಾಲುಗಳನ್ನು ತಿದ್ದುವನು. ತನ್ನೆದೆಯೊಳಗಿನ ಭಾವದ್ರವ್ಯದಿಂದ ಹೊಸತೇ ಆದ ಪಂಕ್ತಿಗಳನ್ನೂ ಬರೆಯುವನು! ಪ್ರೀತಿ ವಿರಹ ವಿಷಾದ ವೇದನೆ ಮಹಾರಾಜನಲ್ಲಿ ಕಾವ್ಯಶಕ್ತಿಯನ್ನು ತುಂಬಿದ್ದವು. ವಿರಹದಲ್ಲಿಯೇ ಪ್ರೇಮನಿವೇದನೆ ಸಾಧ್ಯವಾಗುವ ಪರಿಗೆ ಬೆರಗಾದನು. ಮಹಾರಾಜನು ರಾಜ್ಯಭಾರವನ್ನು ಕಡೆಗಣಿಸಿ ಏಕಾಂತದಲ್ಲಿರುವುದು ಮಹಾಮಂತ್ರಿಗೆ ಚಿಂತೆಗೀಡುಮಾಡಿತು.